ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಕಾರ್ಯಾಲಯ
ಜಿಲ್ಲಾ ಪಂಚಾಯತ್ ವಿಜಯನಗರ ಜಿಲ್ಲೆ
ಜಿಲ್ಲಾಧಿಕಾರಿಗಳ ಕಛೇರಿ ಕಟ್ಟಡ
ಟಿ.ಬಿ.ಡ್ಯಾಂ ರಸ್ತೆ ಹೊಸಪೇಟೆ-583225

Office of the Chief Executive officer
ZillaPanchayathVijayanagara District
DC Office Building
T.B Dam Road Hospet-583225

Email:ceozpvijayanagara@gmail.com ಗ್ರಾಮೀಣಾಭಿವೃದ್ಧಿ & ಪಂಚಾಯತ್ ರಾಜ್ ಇಲಾಖೆ

ಸಂ:ಜಿಪಂವಿ/ಉಖಾಯೋ-ಕೋಶ/ಹೊ.ಗು.ಹುದ್ದೆ.ಭರ್ತಿ/01/2023-2024 ದಿ:- 28.02.2024

**ಇವರಿಗೆ,**

ಮನಿಷ್ ಮ್ಯಾನ್ ಪವರ್ ಏಜೆನ್ಸಿ
ಶಾಪ್-ನಂ-ಬಿಎಫ್-10ಎ, ಜಾಜೀ ಆರ್ಕೇಡ್,
ಎಸ್ ಬಿ ಕಾಲೇಜ್ ರೋಡ್, ಸಂಗಮೇಶ್ವರ ನಗರ,
ಗುಲ್ಬರ್ಗ-585103.

**ಮಾನ್ಯರೇ,**

**ವಿಷಯ:-** ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ಅನುಷ್ಠಾನಕ್ಕಾಗಿ ಜಿಲ್ಲಾ ವ್ಯಾಪ್ತಿಯಲ್ಲಿ ಖಾಲಿ ಇರುವ ಹೊರಗುತ್ತಿಗೆ ಆಧಾರದ ಹುದ್ದೆಗಳಿಗೆ ಅರ್ಜಿ ಆಹ್ವಾನಿಸುವ ಬಗ್ಗೆ

**ಉಲ್ಲೇಖ:-**
1. ಮಾನ್ಯ ಸರ್ಕಾರದ ಪತ್ರ ಸಂ:ಗ್ರಾ.ಅ.ಪ/104/ಉಖಾಯೋ/2007 ದಿನಾಂಕ:05.06.2009
2. ಮಾನ್ಯ ಸರ್ಕಾರದ ಪತ್ರ ಸಂ:ಗ್ರಾ.ಅ.ಪ292 ಉಖಾಯೋ/2012 ದಿನಾಂಕ:30.11.2013
3. ಮಾನ್ಯ ಆಯುಕ್ತರ ಪತ್ರ ದಿನಾಂಕ:20.12.2014
4. ಮಾನ್ಯ ಆಯುಕ್ತರ ಪತ್ರ ಸಂ:ಗ್ರಾ.ಅ.ಪ ಉಖಾಯೋ/2020 ದಿನಾಂಕ:05.04.2021
5. ಮಾನ್ಯ ಸರ್ಕಾರದ ಪತ್ರ ಸಂ:ಗ್ರಾ.ಅ.ಪ.ಉ.ವಿ/66/2021/ಇ-45513 ದಿನಾಂಕ:05.04.2021
6. ಮಾನ್ಯ ಸರ್ಕಾರದ ಪತ್ರ ಸಂ:RDC-EGS/50/2021 (E-442252) 04.08.2021. 04.03.2021
7. ಮಾನ್ಯ ಸರ್ಕಾರದ ಪತ್ರ ಸಂ:RDC-EGS/29/2020 05.03.2020
8. ಮಾನ್ಯ ಸರ್ಕಾರದ ಪತ್ರ ಸಂ:RDC-EGS/3/2019 ದಿನಾಂಕ:17.09.2019
9. ಮಾನ್ಯ ಸರ್ಕಾರದ ಪತ್ರ ಸಂ:RDC-EGS/874/2022 (E-931951) ದಿನಾಂಕ:01.12.2022

*************

ಈ ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ವಿಜಯನಗರ ಜಿಲ್ಲಾ ಪಂಚಾಯತಿ ವ್ಯಾಪ್ತಿಯಲ್ಲಿ ಬರುವ 6 ತಾಲ್ಲೂಕು ಪಂಚಾಯತಿಗಳ ವ್ಯಾಪ್ತಿಯಲ್ಲಿ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಹೊರಗುತ್ತಿಗೆ ಆಧಾರದ ಮೇಲೆ 1) ತಾಂತ್ರಿಕ ಸಹಾಯಕರು (ಕೃಷಿ) 2) ತಾಂತ್ರಿಕ ಸಹಾಯಕರು (ಅರಣ್ಯ) 3) ತಾಂತ್ರಿಕ ಸಹಾಯಕರು (ತೋಟಗಾರಿಕೆ) 4) ತಾಂತ್ರಿಕ ಸಹಾಯಕರು (ರೇಷ್ಮೆ) 5) ಗಣಕ ಯಂತ್ರ ನಿರ್ವಾಹಕರು ಹುದ್ದೆಗಳನ್ನು ಉಲ್ಲೇಖಿತ 1 ರಿಂದ 9 ರವರೆಗಿನ ಮಾನ್ಯ ಸರ್ಕಾರದ ಆದೇಶಗಳಲ್ಲಿ ನೀಡಲಾಗಿರುವ ನಿರ್ದೇಶನದಂತೆ ಹೊರಗುತ್ತಿಗೆ ಆದಾರದ ಮೇಲೆ ಮಾನವ ಸಂಪನ್ಮೂಲ ಸರಬರಾಜು ಸಂಸ್ಥೆಯ ಮೂಲಕ ಸೇವೆಯನ್ನು ಪಡೆಯಲು ಈ ಕೆಳಕಂಡ ಅನುಬಂಧದಲ್ಲಿರುವಂತೆ ಅರ್ಹ ಅಭ್ಯರ್ಥಿಗಳಿಂದ online ಮೂಲಕ ಅರ್ಜಿಯನ್ನು ಆಹ್ವಾನಿಸಲಾಗಿದೆ.

ಅರ್ಹ ಅಭ್ಯರ್ಥಿಗಳು ಆನ್ ಲೈನ್ ಮೂಲಕ NiC ಜಿಲ್ಲಾ ವೆಬ್ ಸೈಟ್ https://vijayanagara.nic.in ಮೂಲಕ ಅರ್ಜಿ ಸಲ್ಲಿಸಲು ಒದಗಿಸಲಾದ Link ಬಳಸಿಕೊಂಡು ಅರ್ಜಿ ಸಲ್ಲಿಸಲು ರಾಜ್ಯ ಮತ್ತು ಜಿಲ್ಲಾಮಟ್ಟದ ಪ್ರಚಲಿತ ದಿನಪತ್ರಿಕೆಗಳಲ್ಲಿ ಹೆಚ್ಚು ಹೆಚ್ಚು ಜಾಹಿರಾತು ನೀಡಿ ಪ್ರಚುರಪಡಿಸಲು ಸೂಚಿಸಲಾಗಿದೆ.

ವಿವರ ಈ ಕೆಳಗಿನಂತಿದೆ:-

| ಕ್ರ. ಸಂ | ಹುದ್ದೆಯ ಹೆಸರು | ಖಾಲಿ ಹುದ್ದೆಗಳ ಸಂಖ್ಯೆ | ವಿದ್ಯಾರ್ಹತೆ ಹಾಗೂ ಅನುಭವ | ವಯೋಮಿತಿ |
|---|---|---|---|---|
| 01 | ತಾಂತ್ರಿಕ ಸಹಾಯಕರು (ತೋಟಗಾರಿಕೆ) | 3 | Graduationl in Horticulture other equivalent qualification with computer knowledge. ಹಾಗೂ ಸಂಬಂಧಿಸಿದ ಕ್ಷೇತ್ರದಲ್ಲಿ ಕನಿಷ್ಟ 2-3 ವರ್ಷ ಅನುಭವ ಹೊಂದಿರತಕ್ಕದ್ದು | 21 ರಿಂದ 40 ವರ್ಷಗಳು |
| 02 | ತಾಂತ್ರಿಕ ಸಹಾಯಕರು (ಅರಣ್ಯ) | 4 | Graduation in Forest & other equivalent qualification with computer knowledge. ಹಾಗೂ ಸಂಬಂಧಿಸಿದ ಕ್ಷೇತ್ರದಲ್ಲಿ ಕನಿಷ್ಟ 2-3 ವರ್ಷ ಅನುಭವ ಹೊಂದಿರತಕ್ಕದ್ದು | 21 ರಿಂದ 40 ವರ್ಷಗಳು |
| 03 | ತಾಂತ್ರಿಕ ಸಹಾಯಕರು (ಕೃಷಿ) | 2 | Graduationl in Agriculture and other equivalent qualification with computer knowledge. ಹಾಗೂ ಸಂಬಂಧಿಸಿದ ಕ್ಷೇತ್ರದಲ್ಲಿ ಕನಿಷ್ಟ 2-3 ವರ್ಷ ಅನುಭವ ಹೊಂದಿರತಕ್ಕದ್ದು | 21 ರಿಂದ 40 ವರ್ಷಗಳು |
| 04 | ತಾಂತ್ರಿಕ ಸಹಾಯಕರು (ರೇಷ್ಮೆ) | 3 | Graduation in Sericulture & other equivalent qualification with computer knowledge. ಹಾಗೂ ಸಂಬಂಧಿಸಿದ ಕ್ಷೇತ್ರದಲ್ಲಿ ಕನಿಷ್ಟ 2-3 ವರ್ಷ ಅನುಭವ ಹೊಂದಿರತಕ್ಕದ್ದು | 21 ರಿಂದ 40 ವರ್ಷಗಳು |
| 05 | ಗಣಕ ಯಂತ್ರ ನಿರ್ವಾಹಕರು | 1 | 1. ವಿದ್ಯಾರ್ಹತೆ:-ಯಾವುದೇ ಪದವಿ 2.ಕನಿಷ್ಠ 06 ತಿಂಗಳ ಕಂಪ್ಯೂಟರ್ ಜ್ಞಾನ ಹೊಂದಿರುವ ಬಗ್ಗೆ ಪ್ರಮಾಣ ಪತ್ರ (ಸರ್ಕಾರದ ನೊಂದಾಯಿತ ಸಂಸ್ಥೆಯಿಂದ) 3.ಕನ್ನಡ ಮತ್ತು ಇಂಗ್ಲಿಷ್ ಟೈಪಿಂಗ್ ಹಾಗೂ M.S OFFICE ನಲ್ಲಿ ಉತ್ತಮ ಕಾರ್ಯನಿರ್ವಹಣೆಯ ಅನುಭವ. | 21 ರಿಂದ 40 ವರ್ಷಗಳು |

- ಅರ್ಜಿ ಸಲ್ಲಿಸಲು ಪ್ರಾರಂಭದ ದಿನಾಂಕ: 01.03.2024
- ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 11.03.2024
- ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳ ಮೂಲ ದಾಖಲೆಗಳ ಪರಿಶೀಲನೆಗೆ ಜಿಲ್ಲಾ ಪಂಚಾಯತಿ ಕಾರ್ಯಾಲಯಕ್ಕೆ ಹಾಜರಾಗಬೇಕಾದ ದಿನಾಂಕ: 15.03.2024
- ಅಭ್ಯರ್ಥಿಗಳ ತಾತ್ಕಾಲಿಕ ಮೆರಿಟ್ ಪಟ್ಟಿಯನ್ನು ಪ್ರಕಟಣೆ ಮಾಡುವ ದಿನಾಂಕ:19.03.2024
- ತಾತ್ಕಾಲಿಕ ಮೆರಿಟ್ ಪಟ್ಟಿಗಳಿಗೆ ಅಭ್ಯರ್ಥಿಗಳಿಂದ ಆಕ್ಷೇಪಣೆ ಸಲ್ಲಿಸುವ ದಿನಾಂಕ:20.03.2024 ರಿಂದ 25.03.2024 ರವರೆಗೆ (ತದನಂತರದ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ)
- ಸಲ್ಲಿಕೆಯಾದ ಆಕ್ಷೇಪಣೆಗಳನ್ನು ಪರಿಶೀಲನೆಮಾಡಿ ಅಂತಿಮ ಆಯ್ಕೆ ಪಟ್ಟಿ ಪ್ರಕಟಣೆ ಮಾಡುವ ದಿನಾಂಕ:27.03.2024

**ಸೂಚನೆಗಳು** :-

- ಆಯ್ಕೆಯಾದ ಅಭ್ಯರ್ಥಿಗಳನ್ನು ಹೊರಗುತ್ತಿಗೆ ಆಧಾರದ ಮೇಲೆ ಮಾನವ ಸಂಪನ್ಮೂಲ ಸಂಸ್ಥೆಯ ಮೂಲಕ ಸೇವೆಗೆ ಪಡೆಯಲಾಗುವುದು.

- ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳು ಅರ್ಜಿ ನಮೂನೆಯಲ್ಲಿ ನಮೂದಿಸಿರುವ ದಾಖಲೆಗಳಾದ ವಿದ್ಯಾರ್ಹತೆ/ಸೇವಾನುಭವಕ್ಕೆ ಸಂಬಂಧಪಟ್ಟ ಎಲ್ಲಾ ಮೂಲ ಪ್ರಮಾಣ ಪತ್ರ/ದಾಖಲೆಗಳನ್ನು ಪರಿಶೀಲನಾ ಸಮಯದಲ್ಲಿ; ಕಡ್ಡಾಯಕವಾಗಿ ಹಾಜರುಪಡಿಸುವುದು ತಪ್ಪಿದಲ್ಲಿ ಅಭ್ಯರ್ಥಿಯ ಅರ್ಜಿಯನ್ನು ತಿರಸ್ಕರಿಸಲಾಗುವುದು.
- ದಾಖಲಾತಿ ಪರಿಶೀಲನೆಯಲ್ಲಿ ಅರ್ಹಗೊಂಡ ಅಭ್ಯರ್ಥಿಗಳನ್ನು ವಿದ್ಯಾರ್ಹತೆ ಹೊಂದಿದ ಅಂಕಗಳು ಹಾಗೂ ಪಡೆದ ಸೇವಾ ಅನುಭವದ ಆಧಾರದ ಮೇಲೆ ಅರ್ಹತಾ ಪಟ್ಟಿಯನ್ನು ತಯಾರಿಸಿ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಪ್ರಚುರಪಡಿಸಲಾಗುವುದು.
- ಸದರಿ ತಾತ್ಕಾಲಿಕ ಮೆರಿಟ್ ಪಟ್ಟಿಗೆ ಆಕ್ಷೇಪಣೆ ಆಹ್ವಾನಿಸಿ ಸಲ್ಲಿಕೆಯಾದ ಆಕ್ಷೇಪಣೆಗಳನ್ನು ನಿಯಮಾನುಸಾರ ಪರಿಶೀಲನೆ ಮಾಡಿ ಅಂತಿಮ ಮೆರಿಟ್ ಪಟ್ಟಿಯನ್ನು ಪ್ರಕಟಣೆಗೊಳಿಸಲಾಗುವುದು.
- ಸದರಿ ಅಂತಿಮ ಮೆರಿಟ್ ಪಟ್ಟಿಯಲ್ಲಿ ಗರಿಷ್ಠ ಅಂಕಗಳನ್ನು ಪಡೆದ ಅಭ್ಯರ್ಥಿಗಳನ್ನು ಸಂಬಂಧಪಟ್ಟ ಹುದ್ದೆಗಳ ಅನುಗುಣವಾಗಿ ಆಯ್ಕೆಗೆ ಪರಿಗಣಿಸಲಾಗುವುದು.
- ಸಂದರ್ಶನ ಇರುವುದಿಲ್ಲ.
- ಖಾಲಿ ಹುದ್ದೆಗಳನ್ನು ಹೆಚ್ಚಿಸುವ ಅಥವಾ ಕಡಿಮೆ ಮಾಡುವ ಅಧಿಕಾರವು ನೇಮಕಾತಿ ಪ್ರಾಧಿಕಾರಿ ಹಾಗೂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಜಿ.ಪಂ.ವಿಜಯನಗರ ರವರು ಹೊಂದಿರುತ್ತಾರೆ.
- ಹುದ್ದೆಗೆ ನಿಗಧಿಪಡಿಸಿದ ವಿಧ್ಯಾರ್ಹತೆ ಅಭ್ಯರ್ಥಿಗಳು ಲಭ್ಯವಾಗದಿದ್ದಲ್ಲಿ ಇತರ ಹುದ್ದೆಗೆ ನಿಗಧಿಪಡಿಸಿದ ವಿಧ್ಯಾರ್ಹತೆ ಉಳ್ಳ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುವುದು.

## ಮಾಸಿಕ ಸಂಭಾವನೆ:-

- ತಾಂತ್ರಿಕ ಸಹಾಯಕ (ಕೃಷಿ, ಅರಣ್ಯ, ತೋಟಗಾರಿಕೆ,ರೇಷ್ಮೆ) ಹುದ್ದೆಗೆ ಮಾಸಿಕ ಸಂಭಾವನೆ ರೂ.28,000/-ಗಳು (ಹಾಗೂ ಪ್ರಯಾಣ ಭತ್ಯೆ ರೂ.2,000/-ಗಳು
- ಗಣಕ ಯಂತ್ರ ನಿರ್ವಾಹಕರು ಹುದ್ದೆಗೆ ಮಾಸಿಕ ಸಂಭಾವನೆ ರೂ.18,000/-ಗಳು ಅಥವಾ ಕಾರ್ಮಿಕ ಇಲಾಖೆಯು DEO ಹುದ್ದೆಗೆ ನಿಗದಿಪಡಿಸಿದ ಕನಿಷ್ಠ ಮಾಸಿಕ ಸಂಭಾವನೆ.

## ಆಯ್ಕೆಯ ವಿಧಾನ:-

ಈ ಕೆಳಕಂಡ ವಿಧಾನವನ್ನು ಅಳವಡಿಸಿ ಮೆರಿಟ್ ಪಟ್ಟಿ ಸಿದ್ಧಪಡಿಸಿ ಮೆರಿಟ್ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲಾಗುವುದು.

## ಹುದ್ದೆ:- ತಾಂತ್ರಿಕ ಸಹಾಯಕ ಕೃಷಿ/ತೋಟಗಾರಿಕೆ/ಅರಣ್ಯ/ರೇಷ್ಮೆ

1. ಕನಿಷ್ಠ ವಿದ್ಯಾರ್ಹತೆಗೆ -60 ಅಂಕಗಳು
2. ಸ್ನಾತಕೊತ್ತರ ಪದವಿಗೆ -20 ಅಂಕಗಳು
3. ನಿಗದಿಪಡಿಸಿದ ಅನುಭವಕ್ಕೆ- 20 ಅಂಕಗಳು ಗರಿಷ್ಠ
   (ನಿಗದಿಪಡಿಸಿದ 36 ತಿಂಗಳು ಅಥವಾ ಹೆಚ್ಚಿನ ಅವಧಿಯ ಅನುಭವಕ್ಕೆ ಗರಿಷ್ಠ 20 ಅಂಕಗಳು (ಅಂದರೆ ಪ್ರತಿ ತಿಂಗಳ ಅನುಭವಕ್ಕೆ 0.56 ಅಂಕಗಳಂತೆ ಸಂಕಲನ ಮಾಡುವುದು)
4. ಒಟ್ಟು – (60+20+20)=100 ಅಂಕಗಳು

## ಹುದ್ದೆ:- ಡಾಟಾ ಎಂಟ್ರೀ ಆಪರೇಟರ್

1. ಕನಿಷ್ಠ ವಿದ್ಯಾರ್ಹತೆಗೆ -100 ಅಂಕಗಳು
2. ಕಂಪ್ಯೂಟರ್ ಸಾಕ್ಷರತೆ ಪರೀಕ್ಷೆಗೆ:-50 ಅಂಕಗಳು
3. ಡಿ.ಇ.ಒ 01 ಹುದ್ದೆಗೆ ಆಯ್ಕೆ ಮಾಡಲು ಕನಿಷ್ಠ ವಿಧ್ಯಾರ್ಹತೆಯ ಆಧಾರದ ಮೇಲೆ ಮೆರಿಟ್ ಪಟ್ಟಿಯನ್ನು ಸಿದ್ಧಪಡಿಸಲಾಗುವುದು.
4. ಮೆರಿಟ್ ಪಟ್ಟಿಯಲ್ಲಿ ಹೆಚ್ಚು ಅಂಕ ಪಡೆದಿರುವ ಅಭ್ಯರ್ಥಿಗಳನ್ನು ಒಂದು ಹುದ್ದೆಗೆ 5 ರಂತೆ (1:5) ರ ಅನುಪಾತದಡಿ ಟೈಪಿಂಗ್ ಮತ್ತು ಕಂಪ್ಯೂಟರ್ ಟೆಸ್ಟ್ ಪರೀಕ್ಷೆ ಹಮ್ಮಿಕೊಳ್ಳಲಾಗುವುದು.
5. ಸದರಿ ಟೈಪಿಂಗ್ ಮತ್ತು ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆಯಲ್ಲಿ 25 ಕಿಂತ ಹೆಚ್ಚಿನ ಅಂಕ ಪಡೆದ ಅಭ್ಯರ್ಥಿಗಳನ್ನು ಮಾತ್ರ ಅಂತಿಮ ಮೆರಿಟ್ ಪಟ್ಟಿಗೆ ಪರಿಗಣಿಸಲಾಗುವುದು.

6. ಸದರಿ ಅಂತಿಮ ಆಯ್ಕೆ ಪಟ್ಟಿಯಲ್ಲಿ ಗರಿಷ್ಠ ಅಂಕಗಳನ್ನು ಪಡೆದ ಅಭ್ಯರ್ಥಿಗಳನ್ನು ಹೊರಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಳ್ಳಲಾಗುವುದು.

ಈ ಮೇಲ್ಕಂಡ ಮಾಹಿತಿಯನ್ನು ಜಿಲ್ಲೆಯಲ್ಲಿ ಹೆಚ್ಚು ಪ್ರಚಲಿತದಲ್ಲಿರುವ ರಾಜ್ಯ/ಜಿಲ್ಲಾ ದಿನ ಪತ್ರಿಕೆಗಳಲ್ಲಿ ಉಚಿತ ಪ್ರಚಾರಕ್ಕೆ ಕ್ರಮವಹಿಸಲು ಈ ಮೂಲಕ ಸೂಚಿಸಲಾಗಿದೆ.

**ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು**
**ಜಿಲ್ಲಾ ಪಂಚಾಯತ್, ವಿಜಯನಗರ**

**ಪ್ರತಿಯನ್ನು :-**

1. ಆಯುಕ್ತರು ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ , ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಬೆಂಗಳೂರು, ಇವರಿಗೆ ಮಾಹಿತಿಗಾಗಿ ಮಾನ್ಯರ ಆಪ್ತ ಶಾಖೆಯ ಮೂಲಕ ಸಲ್ಲಿಸಲಾಗಿದೆ.
2. ಜಿಲ್ಲಾ ಮಾಹಿತಿ ಅಧಿಕಾರಿಗಳು, ಜಿಲ್ಲಾ ಎನ್.ಐ.ಸಿ. ಘಟಕ ಜಿ.ಪಂ. ವಿಜಯನಗರ ಇವರಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸುತ್ತಾ **ಆನ್ ಲೈನ್ NiC ಜಿಲ್ಲಾ ವೆಬ್ ಸೈಟ್** (https://vijayanagara.nic.in) **ನಲ್ಲಿ ಅರ್ಜಿ ನಮೂನೆಯನ್ನು ಆಯ್ಕೆ ವಿಧಾನ & ನಿಗಧಿಪಡಿಸಿದ ವಿದ್ಯಾರ್ಹತೆಗನುಗುಣವಾಗಿ ಕ್ರಮ ಕೈಗೊಂಡು ನಿಗಧಿತ ದಿನಾಂಕ ದಂದು ಅರ್ಹ ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ಅನುವು ಮಾಡಿಕೊಡುವುದು.**
3. ಹಿರಿಯ ಸಹಾಯಕ ನಿರ್ದೇಶಕರು, ವಾರ್ತಾ ಇಲಾಖೆ, ಬಳ್ಳಾರಿ/ವಿಜಯನಗರ ಇವರು ಜಿಲ್ಲಾ ಮತ್ತು ರಾಜ್ಯಮಟ್ಟದ ಪ್ರಚಲಿತ ದಿನಪತ್ರಿಕೆಗಳಲ್ಲಿ ಪ್ರಚಾರಪಡಿಸಲು ಸೂಚಿಸಿದೆ.